ತಾಯಿತಂದೆಯಾಗಿದ್ದ ಎರಡು ಗುಬ್ಬಿಗಳು ರಹೀಮಖಾನನ ಮುಖದ ಸುತ್ತ ಹಾರಾಡುತ್ತ ಆತನನ್ನು ಹೆದರಿಸುವಂತೆ ಚೀತ್ಕರಿಸುತ್ತಿದ್ದವು. ಆತ ಆ ಗೂಡಿನೊಳಗೆ ಇಣಿಕಿ ನೋಡುತ್ತಿದ್ದಂತೆ ತಾಯಿ ಗುಬ್ಬಿ ಆತನ ಮೇಲೆರಗಿತು.

ಮರುದಿನ ಆತ ತನ್ನ ದೈನಂದಿನ ಕೆಲಸ ಆರಂಭಿಸಿದ. ಆ ಹಳ್ಳಿಯಲ್ಲಿ ಈಗಲೂ ಆತನ ಜೊತೆ ಯಾರೂ ಮಾತಾಡುತ್ತಿರಲಿಲ್ಲ. ಮುಂಜಾನೆಯಿಂದ ಇಳಿಹೊತ್ತಿನವರೆಗೆ ಹೊಲದಲ್ಲಿ ತಾನೊಬ್ಬನೆ ಕೆಲಸ ಮಾಡುತ್ತಿದ್ದ. ನೇಗಿಲು ಹೊಡೆಯುವುದು, ಬೆಳೆಗಳಿಗೆ ನೀರು ಹಾಯಿಸುವುದು ಹೀಗೆ ಎಲ್ಲ ಕೆಲಸಗಳನ್ನು ಮುಗಿಸಿ, ಸೂರ್ಯಾಸ್ತಕಿಂತ ಸಾಕಷ್ಟು ಮೊದಲೇ ಆತ ಮನೆಗೆ ಮರಳುತ್ತಿದ್ದ. ನಂತರ ತನ್ನ ಹೊರಸಲಿನ ಮೇಲೆ ಮಲಗಿ, ಹುಕ್ಕಾ ಸೇದುತ್ತ, ಗುಬ್ಬಿಗಳ ಕುಟುಂಬದ ವಿಕಟ ಚೇಷ್ಟೆಗಳನ್ನು ತುಂಬ ಕುತೂಹಲದಿಂದ ವೀಕ್ಷಿಸುತ್ತಿದ್ದ. ಆ ಎರಡು ಪುಟ್ಟ ಮರಿಗಳು ಇದೀಗ ಚೆಂದದ ಗುಬ್ಬಿಗಳಾಗಿ ಬೆಳೆದಿದ್ದವು. ಎಷ್ಟೋ ದಿನಗಳ ಕಾಲ ಅವುಗಳನ್ನು ತನ್ನ ಮಕ್ಕಳ ಹೆಸರಿನಿಂದ ಅಂದರೆ, 'ನೂರಲ್' ಮತ್ತು 'ಬಂಡು' ಎಂದೇ ಕರೆಯುತ್ತಿದ್ದ. ಈ ಜಗತ್ತಿನಲ್ಲಿ ಆ ನಾಲ್ಕು ಗುಬ್ಬಿಗಳು ಮಾತ್ರ ಆತನ ಗೆಳೆಯರಾಗಿದ್ದವು. ಆತನ ನೆರೆಹೊರೆಯರವರು ಈಗಲೂ ಸಹ ಆತನನ್ನು ಕಂಡು ಹೆದರುತ್ತಿದ್ದರು. ಆತನ ಈಗಿನ ಶಾಂತ ಸ್ವಭಾವದ ನಿಲುವನ್ನು ಕೂಡ ಅವರು ಸಂಶಯ ದೃಷ್ಟಿಯಿಂದಲೇ ನೋಡುತ್ತಿದ್ದರು. ಇತ್ತೀಚೆಗೆ, ತನ್ನ ಎತ್ತುಗಳಿಗೆ ಹೊಡೆಯುವುದನ್ನು ಯಾರೊಬ್ಬರೂ ನೋಡಿರಲಿಲ್ಲ. ನಿಜಕ್ಕೂ ಅದು ಆಶ್ಚರ್ಯಕ್ಕೆ ಕಾರಣವಾಗಿತ್ತು. ನಾಥೂ ಹಾಗೂ ಚಿಡ್ಡೂ ಎಂಬ ಹೆಸರಿನ ಆ ಎರಡೂ ಎತ್ತುಗಳು ತಮ್ಮಷ್ಟಕ್ಕೆ ತುಂಬ ಖುಷಿಯಾಗಿದ್ದವು. ಅಲ್ಲದೆ ಆತನಿಗೆ ಅವು ಋಣಿಯಾಗಿದ್ದವು. ಈಗ ಅವುಗಳ ದೇಹದ ಗಾಯಗಳು ಕೂಡ ಬಹುತೇಕ ವಾಸಿಯಾಗಿದ್ದವು.

ಒಂದು ಮುಂಗಾರು ಮಳೆಯ ಸಂಜೆ, ಆಕಾಶದ ತುಂಬೆಲ್ಲ ಗರ್ಜಿಸುವ ಮೋಡಗಳು ಕಿಕ್ಕಿರಿದು ಮುಸುಕಿದ್ದವು. ರಹೀಮಖಾನ ಎಂದಿಗಿಂತ ಮೊದಲೇ ಹೊಲದಿಂದ ಮರಳಿ ಬಂದಿದ್ದ. ಮಕ್ಕಳ ಒಂದು ಗುಂಪು ರಸ್ತೆಯಲ್ಲಿ ಆಡುತ್ತಿತ್ತು. ಆತನನ್ನು ನೋಡುತ್ತಲೇ ಮಕ್ಕಳೆಲ್ಲ ತಮ್ಮ ತಮ್ಮ ಬೂಟುಗಳನ್ನು ಸಹ ಅಲ್ಲಿಯೇ ಬಿಟ್ಟು ಅವಸರದಿಂದ ಓಡಿ ಹೋದರು. "ನೀವೆಲ್ಲ ಏಕೆ ಓಡಿ ಹೋಗುತ್ತೀರಿ? ನಾನೇನು ನಿಮ್ಮನ್ನು ಹೊಡೆಯುವುದಿಲ್ಲ'' ಎಂದು ರಹೀಮಖಾನ ಕೂಗಿದ್ದು ನಿರರ್ಥಕವಾಯಿತು.

ಏತನ್ಮಧ್ಯೆ, ತುಂತುರು ಮಳೆ ಉದುರಲಾರಂಭಿಸಿತು. ಮಳೆಯ ರಭಸ ಹೆಚ್ಚಾಗುವುದರೊಳಗಾಗಿ, ತನ್ನ ಎತ್ತುಗಳನ್ನು ಆಸರೆಗೆ ಕಟ್ಟಲೆಂದು ಆತ ತನ್ನ ಮನೆಯತ್ತ ಅವಸರದಿಂದ ಹೆಜ್ಜೆ ಹಾಕಿದ.

ಮನೆಗೆ ಬಂದವನೇ ರಹೀಮಖಾನ ಮಣ್ಣಿನ ಎಣ್ಣೆ ದೀಪ ಹಚ್ಚಿಟ್ಟು, ತನ್ನ ರಾತ್ರಿಯ ಅಡಿಗೆ ಮಾಡುವುದಕ್ಕೂ ಮುನ್ನ, ಕೆಲವು ರೊಟ್ಟಿಯ ತುಂಡುಗಳನ್ನು ಗುಬ್ಬಿಗಳ ಗೂಡಿನ ಬಳಿ ಇರಿಸಿದ. 'ಏ ನೂರು, ಏ ಬಂಡು' ಎಂದು ಕೂಗಿದ. ಆದರೆ ಗುಬ್ಬಿಗಳು ಹೊರಗೆ ಬರಲೇ ಇಲ್ಲ. ತನ್ನ ಆ ಗೆಳೆಯರಿಗೆ ಏನಾಯಿತೆಂದು ತಿಳಿದುಕೊಳ್ಳುವ ಕುತೂಹಲದಿಂದ ಆತ ಗೂಡಿನೊಳಗೆ ಇಣಿಕಿದ. ನಾಲ್ಕೂ ಗುಬ್ಬಿಗಳು, ಗಾಬರಿಯಿಂದ, ತಮ್ಮ ರೆಕ್ಕೆಗಳೊಳಗೆ ಮುಖ ಹುದುಗಿಸಿಕೊಂಡು ಮುದ್ದೆಯಾಗಿ ಕುಳಿತಿದ್ದವು. ಆ ಗೂಡು ಇದ್ದ ಸ್ಥಳದ ಗುಡಿಸಲಿನ ಮೇಲ್ಛಾವಣಿಯಿಂದ ನೀರು ಸೋರುತ್ತಿತ್ತು. ರಹೀಮಖಾನ ತಡ ಮಾಡದೆ, ಒಂದು ನಿಚ್ಚಣಿಕೆ ತೆಗೆದುಕೊಂಡು, ಸೋರುವಿಕೆಯನ್ನು ಸರಿಪಡಿಸಲೆಂದು, ಸುರಿಯುತ್ತಿದ್ದ ಮಳೆಯಲ್ಲೇ ಹೊರಗೆ ಬಂದ. ಎಲ್ಲವನ್ನು